**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No. 1059/2021**

**CW- 8** **PW:3**

ಸಾಕ್ಷಿಯ ಹೆಸರು ಃ ಜೆ ಆರ್ ನಾಗಣ್ಣವರ
ತಂದೆ /ಗಂಡನ ಹೆಸರು ಃ ರಾಮಣ್ಣ
ವಯಸ್ಸು ಃ 55 ವರ್ಷ
ಉದ್ಯೋಗ ಃ ಪಿ ಎಸ್ ಐ ಸೌಥ್ ಟ್ರಾಫಿಕ್
ವಾಸಸ್ಥಳ ಃ ಹುಬ್ಬಳ್ಳಿ

ದಿಃ **04.04.2025.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ**

2015 ರಿಂದ 2021 ರ ವರೆಗೆ ಎ ಪಿ ಎಂ ಸಿ ನವನಗರ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಕರ್ತವ್ಯ ನಿರ್ವಹಿಸಿರುತ್ತೇನೆ.

ಪ್ರಸ್ತುತ ಪ್ರಕರಣದ ಕಡತವನ್ನು ಚಾಸಾಃ 7 ರವರಿಂದ ಪಡೆದುಕೊಂಡು ತನಿಖೆ ಮುಂದುವರೆಸಿರುತ್ತೇನೆ. ದಿನಾಂಕ 15.11.2020 ರಂದು ಚಾಸಾ-1 ರವರ ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ಪಂಚನಾಮೆ ಜರುಗಿಸಿರುತ್ತೇನೆ ಹಾಗೂ ಬಳೆ ಚೂರುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-1 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಬಳೆ ಚೂರುಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ 1 ಎಂದು ಗುರುತಿಸಿರುತ್ತದೆ. ಅದೇ ದಿನ ಚಾಸಾಃ 4 ಮತ್ತು 5 ಇವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ದಿಃ 07.01.2021 ರಂದು ಚಾಸಾಃ 6 ರವರ ಕಡೆಯಿಂದ ಚಾಸಾಃ 1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ದಿನಾಂಕ 23.01.2021 ರಂದು ತನಿಖೆಯನ್ನು ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಾಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ  ಆರೋಪಿ ಪರ ವಕೀಲರಿಂದಃ**

ಚಾಸಾಃ 2 ಮತ್ತು 3 ಇವರಿಗೆ ಪಂಚರಾಗಲು ನೊಟಿಸು ನೀಡಿಲ್ಲ. ನೀಡಲು ನನಗೆ ತೊಂದರೆ ಇರಲಿಲ್ಲ. ನಾನು ನಿಪಿ.1 ರ ಪ್ರಕಾರ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಮು ಮಾ 1 ಘಟನೆ ಸ್ಥಳದಲ್ಲಿ ಇತ್ತು ಎಂದು ತೊರಿಸಲು ಅವುಗಳನು ಬಾವಚಿತ್ರಗಳನ್ನು ತೆಗೆದಿಲ್ಲ ಎಂದರೆ ಸರಿ. ಅ ದಿನ ನನ್ನ ಹತ್ತಿರ ಕ್ಯಾಮೆರಾ ಇದ್ದ ಫೊನ್ ಇರಲಿಲ್ಲ. ನಿಪಿ.1 ರಲ್ಲಿ ನಕಾಶೆಯಲ್ಲಿ ಮು ಮಾ 1 ಎಲ್ಲಿ ಬಿದ್ದಿದ್ದವು ಎಂದು ಗುರುತು ಮಾಡಿಲ್ಲ ಎಂದರೆ ಸರಿ. ಯಾವದೇ ಬಳೆಗಳು ಬಿದ್ದಿರಲ್ಲಿ ಹಾಗೂ ನಾನು ಪಂಚನಾಮೆ ಸಹ ಮಾಡಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಲು ಫಿರ್ಯಾದಿ ಮಾತು ಕೇಳಿ ಠಾಣೆಯಲ್ಲಿ ಪಂಚನಾಮೆ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.  ಘಟನೆ ದಿಃ 01.11.2020 ರಂದು ಘಟನೆ ಆಗಿದೆ ಎಂದು ಹೇಳಿದ್ದು ದಿಃ 14.11.2020 ರಂದು ಫಿರ್ಯಾದಿ ಸಲ್ಲಿಸಿದ್ದು ಏಕೆ ವಿಳಂಬ ಆಗಿದೆ ಎಂಬುದರ ಬಗ್ಗೆ ಚಾಸಾಃ 1 ರವರು ಹೇಳಿಕೆ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ತನಿಖಾ ಸಮಯದಲ್ಲಿ ಆರೋಪಿತರು ಯಾವದೇ ಅಪರಾಧ ಮಾಡಿಲ್ಲ ಎಂದು ಕಂಡುಬಂದರೂ ಸಹ ನಾನು ಅವರ ವಿರುದ್ದ ಸುಳ್ಳು ಫಿರ್ಯಾದದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.  ನಿಪಿ.3 ಕ್ಕೂ ಹಾಗೂ ಪ್ರಸ್ತುತ ಪ್ರಕರಣಕ್ಕೂ ಯಾವದೇ ಸಂಬಂದ ಇರದೇ ಇದ್ದರೂ ಸಹ ಅದನ್ನು ಈ ಪ್ರಕರಣಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಹಾಗೂ ಪ್ರಸ್ತುತ ಪ್ರಕರಣಕ್ಕೂ ಯಾವದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.  ನಾನು ಯಾವದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**(**ಶ್ರೀಮತಿ ದೀಪಾ  ಜಿ ಮನೇರಕರ**)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.